ಮಾನ್ಯ ಅಧ್ಯಕ್ಷರೆ, 2010ರ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) (ನಗರಾಭಿವೃದ್ಧಿ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 2010ರ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) (ನಗರಾಭಿವೃದ್ಧಿ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 2010ರ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ – ಅನುಬಂಧ–VI

(ಈ) ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

4) ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕ 2010

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಜೆ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) ಮಾನ್ಯ ಅಧ್ಯಕ್ಷರೆ, 2010ರ ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಜೆ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಇವತ್ತು ಜಾಗತಿಕ ಮತ್ತು ಆರ್ಥಿಕ ಮುಗ್ಗಟ್ಟಿನೊಡನೆ ಹೋರಾಡಲು ಮತ್ತು ಸರ್ಕಾರ ಈ ಕೈಗಾರಿಕೆಗಳನ್ನು ಪ್ರೋತ್ಸಾಹ ಮಾಡಲಿಕ್ಕೆ 2009 ರಿಂದ 2014 ರವರೆಗೆ ಹೊಸದಾಗಿ ಒಂದು ಕೈಗಾರಿಕೆ ನೀತಿಯನ್ನು ಮಾಡಿದೆ. ಎಲ್ಲಾ ಕಡೆ ಡಾ: ನಂಜುಂಡಪ್ಪ ವರದಿಯ ಪ್ರಕಾರ ಹಿಂದುಳಿದ ಪ್ರಾಂತಗಳು ಇವೆ, ಅಲ್ಲೆಲ್ಲಾ ಈ Industrial ಗಳಾದ ಸಣ್ಣ ಕೈಗಾರಿಕೆ ಇರಬಹುದು, ಅತೀ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಇರಬಹುದು. ಈ ಎಲ್ಲಾ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡಲಿಕ್ಕೆ ಈ stamp exemption ಮಾಡಲಿಕ್ಕೆ ಈ ಬಿಲ್ ತಂದಿರುತ್ತೇವೆ. ಇದರಲ್ಲಿ Zone 1,2,3, Zone 1-2 ಗೆ 100% ವಿನಾಯಿತಿಯನ್ನು ಕೊಡುತ್ತೇವೆ. Zone-3 ಗೆ 75% ವಿನಾಯಿತಿಯನ್ನು ಕೊಡುತ್ತೇವೆ. ಆದ್ದರಿಂದ ಇದು ಕೈಗಾರಿಕೆಗಳನ್ನು ಪ್ರೋತ್ಸಾಹ ಮಾಡಲಿಕ್ಕೆ ರಾಜ್ಯದ ಎಲ್ಲಾ ಕಡೆಗಳಲ್ಲಿ ಕೈಗಾರಿಕೆಗಳು ಬಂದು ಸುಮಾರು 10 ಲಕ್ಷ ಜನರಿಗೆ ಉದ್ಯೋಗವನ್ನು ಕೊಡಲಿಕ್ಕೆ ಸರ್ಕಾರ ಒಂದು ಯೋಜನೆಯನ್ನು ಮಾಡಿದೆ. ಅದಕ್ಕೆ ಒಂದು ರಿಯಾಯಿತಿಯಲ್ಲಿ ಕೊಡಲಿಕ್ಕೆ ಈ ಬಿಲ್ ತಂದಿರುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ (ಶಿರಾ) : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳ ಹೇಳಿಕೆಯಲ್ಲಿ ಸ್ವಲ್ಪ ಅನುಮಾನ ಬರುತ್ತಿದೆ. ನಾನು ತಿಳಿದುಕೊಂಡಿರುವುದು ನಿಮ್ಮ ಹೊಸ ಪಾಲಿಸಿ ಬಂದಿದೆಯಲ್ಲಾ, 2009 ಮತ್ತು 2014 ಹೊಸ policy ಪ್ರಕಾರ exemption ಕೊಡುವುದಕ್ಕೋಸ್ಕರ ನೀವು ಇದನ್ನು ತಂದಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೆ. ನೀವು ಇಲ್ಲಿ original Act ನೋಡಿ. Original Act ನಲ್ಲಿ ಏನಿದೆ ಅಂದರೆ 'Provided further that the State Government may in public interest, reduce or remit by notification till 31st March 2011,' ಅದನ್ನು ಮಾಡಬೇಕೆಂದು

ಹೇಳಿದ್ದೀರಿ. ನೋಡಿ ಅಲ್ಲಿ ಏನು ಇದೆ, 'the stamp duty payable on any instrument, to be specified therein executed by specified a new tiny, small scale, medium scale or large scale industrial Units or Mega Projects as defined in the New Industrial Policy specified in Government Order CI 319 SPI 2005, dated: 26.08.2006 or by such key projects of core areas as defined in the said policy or sepecified by the State Government from time to time.' ಅದು ಕರೆಕ್ಟ್ ಇದೆ. ಆದರೆ ನೀವು ಇಲ್ಲಿ amendment ಏನೆಂದು ತಂದಿದ್ದೀರಿ, ಏನು addition ಮಾಡಿದ್ದೀರೆಂದರೆ. . . .

Amendment of Section 9 ರಲ್ಲಿ ನೀವು ಏನು Provision ಅನ್ನು introduce ಮಾಡುತ್ತಿದ್ದೀರಿ ಎಂದರೆ, 'provided further that the state Government may, in public interest, by Notification reduce or remit the stamp duty payable on any instrument to be specified therein executed by or between special Economic Zones Developer,' ಎಂದು first ತಂದಿರಿ. 'Co-Developer' ಅದು ಏನರ್ಥ? 'Land Owner' ಅದು ಏನರ್ಥ? 'Karnataka Industrial Areas Development Board and Financial Institutions as defined' ಅದನ್ನು ನಾನು ಒಪ್ಪುತ್ತೇನೆ. ಇಲ್ಲಿ developer, co-developer, land owners ಅನ್ನು ನೀವು ಮಾಡುತ್ತಿದ್ದೀರಲ್ಲಾ, ಇದರಲ್ಲಿ ಏನರ್ಥ ಇದೆ? ಈಗ exemption ಎಂದರೆ, ಸರ್ಕಾರದ ಸ್ವಾಮ್ಯದಲ್ಲಿರತಕ್ಕಂತಹ KIADB ಯವರು ಮಾಡತಕ್ಕಂತಹದ್ದಕ್ಕೆ ಯಾವುದಕ್ಕಾದರೂ ನೀವು exemption ಕೊಟ್ಟರೆ, it is all right. A,B,C ಎಂದು ನೀವು ಮಾಡುತ್ತೀರಲ್ಲಾ, ಅದನ್ನು ಮಾಡುವಾಗ ಅದು ಸರಿ. If it is a layout developed by the KIADB or KSSIDC or Any Government agency, ನಿಮ್ಮ original Act ಪ್ರಕಾರ ಕರೆಕ್ಟ್ ಆಗಿ ಇದೆ. ಅದನ್ನು ಬಿಟ್ಟು ನೀವು ಹೊಸದಾಗಿ ಶುರು ಮಾಡಿದ್ದೀರಲ್ಲಾ, ಇದು ಏನು ಕಥೆ? Developer, Co-developer, land owner ಎಂದು ಹೇಳಿದರೆ ಇದು ಏನರ್ಥ? 'Executed by or between Special Economic Zone Developer, Co-Developer, Land Owners' ಎಂದು ಅವರಿಗೆಲ್ಲಾ ಸೇರುತ್ತದಲ್ಲಾ, ಇದು ಹೇಗೆ? ಇದು ನನಗೆ

ಅರ್ಥವಾಗಲಿಲ್ಲ. ಮಸೂದೆಯನ್ನು ತಂದಿರುವವರು ನೀವು. ನಮಗೆ ನೀವು explain ಮಾಡಬೇಕು. Land owner ಎಂದು ಹೇಳುತ್ತೀರಿ. ಅದು ಯಾರು? ಇದು ಹೇಗೆ?

ಶ್ರೀ ಜಿ.ಕರುಣಾಕರರೆಡ್ಡಿ : ಮಾನ್ಯ ಅಧ್ಯಕ್ಷರೆ, ವಿಶೇಷ ಆರ್ಥಿಕ ವಲಯಕ್ಕೆ ಈ ರೀತಿ ಏನು ಮಾನ್ಯ ಜಯಚಂದ್ರರವರು ಹೇಳಿದರು, ಆ ವಿಶೇಷ ಆರ್ಥಿಕ ವಲಯದಲ್ಲಿ ಬರುವ Industries ಗೆ ಅದನ್ನು develop ಮಾಡಿ ಕೊಡುವುದಕ್ಕೆ ಅವರಾಗಿ ಅವರೇ ಅದನ್ನು ತೆಗೆದುಕೊಂಡರೂ ಸಹ ನಾವು exemption ಮಾಡಬೇಕು. ಕೇಂದ್ರ ಸರ್ಕಾರದ 2005ನೇ Act ಪ್ರಕಾರ ಮತ್ತು ರೂಲ್ 2006ನೇ ಪ್ರಕಾರ ಅವರು 100% exemprtion ನಮಗೆ ಕೊಡಬೇಕು ಎಂದು ಹೇಳಿದ್ದಾರೆ. ಈ Special Economic Zones ಗೆ, you have to extend ಎಂದು ಸೂಚನೆ ಇದೆ. ಆದರಿಂದ ಇವತ್ತು ಯಾರೇ ಆಗಲಿ Apecial Economic Zone ನಲ್ಲಿ industry ಹಾಕುವವರು develop ಮಾಡಿದರೂ ಕೂಡ ಅಥವಾ ಬೇರೆಯವರು develop ಮಾಡಿಕೊಟ್ಟರೂ ಸಹ ಆ land ಆ Industry development purpose ಗೆ use ಆಗುತ್ತದೆ. ಅದರಿಂದ ಆ ರೀತಿ ಇದೆ.

ಶ್ರೀ ಟಿ.ಬಿ.ಜಯಚಂದ್ರ : ಒಂದು ಕೆಲಸ ಮಾಡಿ. ನಿಮಗೆ Special Economic Zone ವ್ಯಾಪ್ತಿಯಲ್ಲಿ ಬರತಕ್ಕಂತಹದ್ದಕ್ಕೆ ಕೊಡಬೇಕು ಎಂದು ಉದ್ದೇಶವಿದ್ದರೆ 'executed by or between Special Economic Zones' ಎಂದು ಹೇಳಿ ಅಷ್ಟಕ್ಕೇ ನಿಲ್ಲಿಸಿ. Developer, Co-developer, land owner ಎಂದು ಹೇಳಿ ಅದನ್ನು ನಿಲ್ಲಿಸಿ misinterpret ಮಾಡಿ ಯಾರೋ ಲಾಭ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಬೇಡಿ.

ಶ್ರೀ ಜಿ. ಕರುಣಾಕರ ರೆಡ್ಡಿ : Special Economic Zone ನಲ್ಲಿ ಮಾಡುವುದು ಇದು ಮಾತ್ರ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : 2009 ರಿಂದ 2014 ರವರೆಗೆ ಇದು ಆಗತಕ್ಕಂತಹದ್ದು. ವಿಶೇಷವಾಗಿ ಏನಾದರೂ ಇದ್ದರೆ ಮತ್ತೆ ಇದನ್ನು ಸದನದ ಮುಂದೆ ತರಬಹುದು. ಸದನದಲ್ಲಿ ನಾವು ಮೀಟ್ ಆಗುತ್ತಲೇ ಇರುತ್ತೇವೆ. Industrial Policy ಏನಿದೆ, ಆ ಪಾಲಿಸಿಯಲ್ಲಿ 2011ಕ್ಕೆ close

ಆಗತಕ್ಕಂಹದ್ದು 2014 ರವರೆಗೆ ಆಗಬೇಕು. .ಅಷ್ಟಕ್ಕೇ ಸೀಮತಿವಾಗಿರಬೇಕು ಬಿಟ್ಟರೆ, ನೀವು ಬೇಕಾದರೆ Special Economic Zones ಎಂದು ಹೇಳಿ. ಆದರೆ, developer, co-developer ಎಂದು ಹೇಳುವುದಕ್ಕೆ ಹೋಗಬೇಡಿ. ಅದು ಏನಾಗುತ್ತದೆ ಎಂದರೆ, ನಾಳೆ ಇನ್ನೊಂದು ರೀತಿಯಲ್ಲಿ ಬೇರೆ ಯಾರೋ ಲಾಭ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಬಿಡುತ್ತದೆ and it will be a loss. Any way, it is encouraging the real estate people only. ಅದಕ್ಕೆ ಅವಕಾಶ ಕೊಡಬೇಡಿ.

ಶ್ರೀ ಜಿ. ಕರುಣಾಕರ ರೆಡ್ಡಿ : ಸ್ಟಾಂಪ್ ಡ್ಯೂಟಿ exemption, Special Economic Zone ನಲ್ಲಿ develop ಮಾಡುವವರು co-developer ಆಗಿರಬಹುದು, ಯಾರೇ developer ಆಗಿರಬಹುದು. ಅದೇ Special Economic Zone ವ್ಯಾಪ್ತಿಯಲ್ಲಿ ಏನು ಮಾಡುತ್ತಾರೋ ಅದಕ್ಕೆ ಮಾತ್ರ ಈ Exemption ಬರುತ್ತದೆ. ಬೇರೆ ಎಲ್ಲಾದರೂ ಮಾಡಿದರೆ exemption ಕೊಡುವುದಕ್ಕೆ ಬರುವುದಿಲ್ಲ.

SRI T.B. JAYACHANDRA ; Special Economic Zone ಎಂದರೆ ಸಾಕು. "within that' ಎಂದು ಈ words ಅನ್ನು ಹಾಕಿ. Developer, Co-developer. . . . .

ಶ್ರೀ ಜಿ.ಕರುಣಾಕರ ರೆಡ್ಡಿ : Land economic zone ವ್ಯಾಪ್ತಿಯಲ್ಲಿ develop ಮಾಡುವವರಿಗೆ ಮಾತ್ರ ನಾನು ಹೇಳುತ್ತಾ ಇದ್ದೇನೆ.

ಅಧ್ಯಕ್ಷರು : Zone ನಲ್ಲಿ 'one who develops' ಎಂದು ಹೇಳಿ ಅಷ್ಟೆ simple word.

ಶ್ರೀ ಟಿ.ಬಿ.ಜಯಚಂದ್ರ : ನೀವು ವಕೀಲರು. ನೀವು clarify ಮಾಡಿ. ನಾನು ಹೇಳುವುದು in academic interest. . .

ಅಧ್ಯಕ್ಷರು : ಅದೇ clarify ಮಾಡುತ್ತಿದ್ದೇನೆ. I am clarifying. It is a very simple word. I don't think there is any ambiguity.

ಶ್ರೀ ಜಗದೀಶ್ ಶೆಟ್ಟರ್ : "ಮತ್ತು ಪರಂತು, ರಾಜ್ಯ ಸರ್ಕಾರವು ಸಾರ್ವಜನಿಕ ಹಿತದೃಷ್ಟಿಯಿಂದ, ವಿಶೇಷ ಆರ್ಥಿಕ ವಲಯ ಅಭಿವೃದ್ಧಿದಾರ, ಸಹ ಅಭಿವೃದ್ಧಿದಾರ, ಭೂಮಾಲೀಕರು, ಕರ್ನಾಟಕ ಕೈಗಾರಿಕಾ ಅಭಿವೃದ್ಧಿ

ಮಂಡಳಿ ಮತ್ತು ಸರ್ಕಾರಿ ಆದೇಶ ಸಂಖ್ಯೆ ಸಿಐ 114 ಎಸ್‌ಪಿಐ 2007, ದಿನಾಂಕ: 28–02–2009 ರಲ್ಲಿ ಪರಿಭಾಷಿಸಿದಂತೆ ಹಣಕಾಸು ಸಂಸ್ಥೆಗಳು ಇವುಗಳಿಂದ ಅಥವಾ ಇವುಗಳ ನಡುವಿನ ಯಾವುದೇ ಲಿಖಿತದ ಮೇಲೆ ಸಂದಾಯವಾಗತಕ್ಕ ಸ್ಟಾಂಪು ಶುಲ್ಕವನ್ನು ಅಧಿಸೂಚನೆ ಮೂಲಕ ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಕಡಿಮೆಗೊಳಿಸಬಹುದು ಅಥವಾ ಮಾಫಿ ಮಾಡಬಹುದು." ಇದು continuity ಇದೆ. ಇದು ಎಲ್ಲರಿಗೂ apply ಆಗುವುದಿಲ್ಲ. ಆ Special Economic Zone ಏನು ಮಾಡುತ್ತಾರೆ ಎಂದರೆ, ಅಲ್ಲಿ develop ಮಾಡುವಂತಹ developer, co-developer ಇವೆಲ್ಲಾ ಬರುತ್ತದೆ. interpretation ಇಷ್ಟೆ ಇದು. ಇದು clear ಆಗಿ ಇದೆ. ಇದರಲ್ಲಿ ಯಾವುದೇ. . . .

ಅಧ್ಯಕ್ಷರು : ಇದರಲ್ಲಿ ambiguity ಇಲ್ಲವೆಂದು ಹೇಳಿದೆ ಅಷ್ಟೆ. There is no ambiguity.

ಶ್ರೀ ಸಿದ್ದರಾಮಯ್ಯ : Amendment ಅನ್ನು ನೀವು ಮಾಡುತ್ತಿದ್ದೀರಿ ಅಲ್ಲವೇ? It should be very specific. ಇದರಲ್ಲಿ ambiguity ಇದೆ.

ಅಧ್ಯಕ್ಷರು : ಇಲ್ಲ. I don't think. ನಾನು ಮೇರಿಟ್‌ಗೆ ಹೋಗುವುದಿಲ್ಲ. But, wordings are very clear.

ಶ್ರೀ ಸಿದ್ದರಾಮಯ್ಯ : ನಾನು ಇನ್ನೊಂದು ಹೇಳುತ್ತೇನೆ. Entrepreneurನ Special Economic Zone ನಲ್ಲಿ Industry developmentಗೆ encourage ಮಾಡುವುದಕ್ಕೆ ಎಂದು ಇದನ್ನು ಮಾಡುತ್ತಿರುವುದು. 2014 ರವರೆಗೆ tax exemption ಅಥವಾ reduce ಮಾಡುವುದಕ್ಕೆ by Notification ಇದನ್ನು ತಂದಿದ್ದೀರಿ. ಈಗ economic recovery ಆಗುತ್ತಿರುವಾಗ, why this concession? ದೇಶದಲ್ಲಿ economic recovery ಆಗುತ್ತಿದೆ ಎಂದು ಎಲ್ಲಾ ಕಡೆಗಳಲ್ಲಿ ಚರ್ಚೆ ಆಗುತ್ತಿರುವಾಗ 2014 ರವರೆಗೆ ಏಕೆ ಕೊಡುವುದಕ್ಕೆ ಹೊರಟಿದ್ದೀರಿ? ದೇಶದಲ್ಲಿ ಸೆಪ್ಟೆಂಬರ್‌ನಿಂದ economic slow down ಆಯಿತು. ಆಗ industry ಗಳು ಬರುತ್ತಿಲ್ಲ, industry ಗಳಿಗೆ encourage ಮಾಡಬೇಕು, investment ಬರುತ್ತಿಲ್ಲ, ಆ ಕಾರಣಕ್ಕೋಸ್ಕರ ಸ್ಟಾಂಪ್ ಡ್ಯೂಟಿಯನ್ನು exemption ಮಾಡಬೇಕು,

reduce ಮಾಡಬೇಕು ಎನ್ನುವುದು, I can understand. ಈಗಾಗಲೇ we are reaching a stage. Economic recovery ಪ್ರಾರಂಭವಾದ ಮೇಲೆ, why do you want to bring this amendment? Why do you want to reduce or exempt stamp duty. ಈಗ 2001ರಲ್ಲಿ . . . . .

ಶ್ರೀ ಜಗದೀಶ್ ಶೆಟ್ಟರ್ : ನಮ್ಮ ರಾಜ್ಯದ್ದು state policy for Special Economc Zone 2009. 2009ರಲ್ಲಿ ನಮ್ಮ ಪಾಲಿಸಿ ತಂದಿದ್ದೇವೆ. ಅದರಲ್ಲಿ for SEZ developers and co-developers ಎಂದು ಅಲ್ಲಿ clear ಇದೆ. ಅದಕ್ಕೆ ಪೂರಕವಾಗಿ ತಂದಿದ್ದೇವೆ.

ಶ್ರೀ ಸಿದ್ದರಾಮಯ್ಯ : ಅದು ಸರಿ. ಒಂದು ವರ್ಷವಾದ ಮೇಲೆ ಏಕೆ ತೆಗೆದುಕೊಂಡು ಬಂದಿರಿ?

ಶ್ರೀ ಜಗದೀಶ್ ಶೆಟ್ಟರ್ : 2009 ರಲ್ಲಿ ತಂದಿದ್ದೇವೆ.

ಶ್ರೀ ಸಿದ್ದರಾಮಯ್ಯ : ಈಗಾಗಲೇ 2010–11ನೇ ವರ್ಷಕ್ಕೆ ಬಂದಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ : Implement ಮಾಡುವ ಸಲುವಾಗಿ ತಂದಿರುವುದು. ಅದರಲ್ಲೂ exemption of stamp duty. . . . .

ಶ್ರೀ ಸಿದ್ದರಾಮಯ್ಯ : ಮಾನ್ಯ ಜಗದೀಶ್ ಶೆಟ್ಟರ್‌ರವರೇ, my first obejection is, in the couutry economic recoveries started. ದೇಶದಲ್ಲಿ economic recession ಏನಿತ್ತು, it is already, ಅದಕ್ಕೆ ಮತ್ತೆ ಚೇತರಿಕೆ ಪ್ರಾರಂಭವಾಗಿದೆ. ಕೇಂದ್ರ ಸರ್ಕಾರವೂ ಹೇಳಿದೆ, ಎಲ್ಲಾ ರಾಜ್ಯಗಳು ಹೇಳಿವೆ ಹಾಗೂ ನಾವು ಕೂಡ ಹೇಳುತ್ತಿದ್ದೇವೆ. ಚೇತರಿಕೆ ಪ್ರಾರಂಭವಾದ ಮೇಲೆ, why do you want this exemption? ಕೇಂದ್ರ ಸರ್ಕಾರ ಹೇಳಿರುವುದು ಎಲ್ಲಿದೆ? ಮಾನ್ಯ ಕರುಣಾಕರರೆಡ್ಡಿಯವರೇ, ಹೇಳಿ ನಮಗೂ ಗೊತ್ತಾಗಬೇಕಲ್ಲವೇ?

Sri G. KARUNAKARA REDDY : As per Central SEZ Act 2005 and Rule 2006, the State Government has to extend 100% Stamp Duty licensed for SEZ's'. ಎಂದು clear ಆಗಿ ಹೇಳಲಾಗಿದೆ.

ಶ್ರೀ ಸಿದ್ದರಾಮಯ್ಯ : SEZ ಗೋಸ್ಕರ ಮಾಡಬೇಕು ಎನ್ನುವುದು 2005–06ನೇ ಇಸವಿಯಲ್ಲಿ ಮಾಡಿರುವುದು. ಈಗ 5 ವರ್ಷಗಳ ಮೇಲೆ ತಂದಿದ್ದೀರಿ.

ಶ್ರೀ ಜಿ. ಕರುಣಾಕರ ರೆಡ್ಡಿ : Central Government ನವರು ಬೇಡವೆಂದರೆ ಇದನ್ನು ಬೇಕಾದರೆ ತೆಗೆದುಬಿಡುತ್ತೇವೆ. ಅವರು extend ಮಾಡಬೇಕು ಎಂದು ಹೇಳಿದ್ದಕ್ಕೆ ನಾವು ಮಾಡುತ್ತಿದ್ದೇವೆ.

(ಗೊಂದಲ)

SRI R.ROSHAN BAIG : My objection is, Special Economic zone ಎಂದು ಮಾಡಿ, we are creating modern Jamindars.

ಶ್ರೀ ಜಗದೀಶ್ ಶೆಟ್ಟರ್ : Government of India ದ್ದು ಪಾಲಿಸಿ ಇದೆ. ರಾಜ್ಯ ಸರ್ಕಾರದ್ದೂ ಸಹ ಪಾಲಿಸಿ ಇದೆ.

ಶ್ರೀ ಆರ್.ರೋಷನ್ ಬೇಗ್ : ಅವರು Industry ಮಾಡುವುದಿಲ್ಲ. Real Estate ಮಾಡುತ್ತಾರೆ. Specia Economic Zone ನಲ್ಲಿ . . . .

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ರೋಷನ್ ಬೇಗ್‌ರವರೇ, ಇದರ ಬಗ್ಗೆ wide range discussion ಆಗಲಿ.

ಶ್ರೀ ಆರ್. ರೋಷನ್ ಬೇಗ್ : ಇದಕ್ಕೆ ಏನಾದರೂ conditions ಹಾಕಿ. Industry statrt ಮಾಡಿದರೆ ಒಂದು ವರ್ಷದಲ್ಲಿ ಅವರು ಕೊಡಲಿ ಎಂದು condition ಹಾಕಿ.

ಶ್ರೀ ಜಗದೀಶ್ ಶೆಟ್ಟರ್ : ಕೇಂದ್ರ ಸರ್ಕಾರದ್ದೂ ಇದೆ. ನಮ್ಮದೂ ಇದೆ.

ಶ್ರೀ ಸಿದ್ದರಾಮಯ್ಯ : ಅವರು Within one year ನಲ್ಲಿ industry ಮಾಡದೇ ಹೋದರೆ, the exemption will be withdrawn.

ಅಧ್ಯಕ್ಷರು : ಇದರಲ್ಲಿ ಹಾಕುವುದಕ್ಕೆ ಬರುವುದಿಲ್ಲ. ಅದನ್ನು ಪಾಲಿಸಿಯಲ್ಲಿ ಹಾಕಬೇಕು. ಇದರಲ್ಲಿ ಹಾಕುವುದಕ್ಕೆ ಬರುವುದಿಲ್ಲ. ಪಾಲಿಸಿಯಲ್ಲೇ ಹಾಕಬೇಕು.

ಶ್ರೀ ಟಿ. ಬಿ. ಜಯಚಂದ್ರ : ನಿಮ್ಮ Industrial Policy ಯಲ್ಲಿಯೂ ಕೂಡ ಆ ಮಾತನ್ನು ಹೇಳಿದ್ದೀರಿ. ಬಹುಶಃ ಪಾಲಿಸಿ ತರುವಾಗಲೇ

ಯೋಚನೆ ಮಾಡಿದ್ದೀರೋ ಏನೋ, Developers ಮತ್ತು Co-Developers ಗೆ help ಮಾಡಬೇಕು ಎನ್ನುವ ಉದ್ದೇಶ ಅವತ್ತೇ ಇದ್ದ ಹಾಗೆ ಕಾಣುತ್ತದೆ. ಅದನ್ನೇ base ಮಾಡಿಕೊಂಡು ಮಾಡುವುದು ಬೇಡ. ಈಗ ನಾನು ಹೇಳುವುದೇನೆಂದರೆ, Special Economic Zone ಅಥವಾ Government Institutions ಎಂದು ಹೇಳಿ ಸಾಕು.

ಅಧ್ಯಕ್ಷರು : Ambiguity ಆಗುತ್ತದೆ.

ಶ್ರೀ ಟಿ.ಬಿ.ಜಯಚಂದ್ರ : Ambiguity ಹೇಗೆ ಆಗುತ್ತದೆ? You can't extend the benefit to private people. ಹಾಗೆ ಹೇಳಿದರೆ ಹೇಗೆ?

ಅಧ್ಯಕ್ಷರು : That is different issue.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಾನು ಹೇಳುವುದನ್ನು ಕೇಳಿ, ಒಂದು ಕೆಲಸವನ್ನು ಮಾಡಿ, "ಮತ್ತು ಪರಂತು ರಾಜ್ಯ ಸರ್ಕಾರವು ಸಾರ್ವಜನಿಕ ಹಿತದೃಷ್ಟಿಯಿಂದ ವಿಶೇಷ ಆರ್ಥಿಕ ವಲಯದಲ್ಲಿ" ಎನ್ನುವುದನ್ನು ಹೇಳಿ.

ಅಧ್ಯಕ್ಷರು : ಪರಂತು ಎಂದರೆ, provided. clear ಆಗಿದೆ.

ಶ್ರೀ ಟಿ.ಬಿ.ಜಯಚಂದ್ರ : ವಲಯದಲ್ಲಿ ಎಂದು ಹೇಳಿ, ಅಭಿವೃದ್ಧಿದಾರ, ಸಹ ಅಭಿವೃದ್ಧಿದಾರ, ಮಾಲೀಕರು ಎನ್ನುವುದನ್ನು ಬಿಟ್ಟುಬಿಡಿ ಅಷ್ಟೆ.

ಶ್ರೀ ಎ. ರಾಮದಾಸ್ : SEZ execute ಮಾಡಲಿಕ್ಕೆ ಭೂ ಮಾಲೀಕರು ಮಾಡಬಹುದು ಅಥವಾ ಯಾರಾದರೂ. . . . ಅವಶ್ಯಕತೆ ಇದೆ.

ಶ್ರೀ ಟಿ.ಬಿ.ಜಯಚಂದ್ರ : ಸುಮ್ಮನಿರಿ. ತಾವು Developers ಪರವಾಗಿ ಮಾತನಾಡುವುದಕ್ಕೆ ಹೋಗಬೇಡಿ.

(ಗೊಂದಲ)

ಅಧ್ಯಕ್ಷರು : ತಾವೇನು ಹೇಳುತ್ತೀರಿ, That can be included in the Policy, not in the Stamp Act. ಪಾಲಿಸಿ ನೀವು ಹೇಳಿ.

ಶ್ರೀ ಟಿ.ಬಿ.ಜಯಚಂದ್ರ : ಪಾಲಿಸಿಯೂ ಇದೆ.

ಅಧ್ಯಕ್ಷರು : ನೀವು ಪಾಲಿಸಿ ಹೇಳಿ. ಅಲ್ಲ, Stamp Act ನಲ್ಲಿ exemption can not be given so and so.

ಶ್ರೀ ಟಿ.ಬಿ.ಜಯಚಂದ್ರ : ನೀವು ಪಾಲಿಸಿಯನ್ನು ಮಾಡಬೇಕಾದರೆ ನೀವು developers ಮತ್ತು co-developers ಎಂದು ಹೇಳಿದ್ದೀರಿ. ಅದಕ್ಕೆ ನಾನು ಹೇಳುವುದೇನೆಂದರೆ, SEZ approved by Government ಎಂದು ಹೇಳಿ ಸಾಕು.

ಶ್ರೀ ಜಿ. ಕರುಣಾಕರರೆಡ್ಡಿ : ಒಂದು ವೇಳೆ SEZ ಯೋಜನೆಯನ್ನು ಕಾರ್ಯಗತಗೊಳಿಸದಿದ್ದಲ್ಲಿ ಅಥವಾ SEZ ನಿಂದ ಹೊರಗೆ ಹೋಗುವ ನಿರ್ಧಾರ ಕೈಗೊಂಡಲ್ಲಿ ಈ ನೀತಿಯಲ್ಲಿ ಪಡೆದಿರುವ ಎಲ್ಲಾ ಹಣಕಾಸಿನ ಲಾಭಗಳನ್ನು ಸರ್ಕಾರಕ್ಕೆ ಮರುಪಾವತಿ ಮಾಡಲು ಮಾಡಿದೆ.

M.R. SPEAKER : It is very clear.

Sri TB. JAYACHANDRA : Approved by the Government ಎಂದು ಹೇಳಿ. As long as approval is there they can avail that facility. Otherwise no.

ಅಧ್ಯಕ್ಷರು : ಇಲ್ಲ, ಇದು clear ಇದೆ. ಮತಕ್ಕೆ ಹಾಕುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಸಾರ್, ನಾನು ಹೇಳುವುದನ್ನು ಕೇಳಿ.

ಅಧ್ಯಕ್ಷರು : ಈಗ ಚರ್ಚೆ ಸಾಕು. St is very clear sir.

ಶ್ರೀ ಟಿ.ಬಿ.ಜಯಚಂದ್ರ : ಏನು ಸಾರ್? ನೀವು ಲಾಯರ್ ಆಗಿರುವವರು. ಪಾಲಿಸಿ. .

ಅಧ್ಯಕ್ಷರು : ನಾನು ಪಾಲಿಸಿ ಬಗ್ಗೆ ಮಾತನಾಡುವುದಿಲ್ಲ. But whatever the amendment is brought, there is no ambiguity. Please co-operate.

ಶ್ರೀ ಟಿ. ಬಿ. ಜಯಚಂದ್ರ : No, no ಪಾಲಿಸಿಯನ್ನೇ base ಮಾಡಿಕೊಂಡು act ನಲ್ಲಿ ತರುತ್ತೇವೆಂದು ಹೇಳಿದರೆ ಹೇಗೆ?

ಅಧ್ಯಕ್ಷರು : ನಾನು ಪಾಲಿಸಿ ಬಗ್ಗೆ ಮಾತನಾಡುವುದಿಲ್ಲ. ಪಾಲಿಸಿ ಬಗ್ಗೆ ನೀವು ಎಷ್ಟು ಹೊತ್ತು ಬೇಕಾದರೂ ಚರ್ಚೆ ಮಾಡಿ.

ಶ್ರೀ ಟಿ.ಬಿ.ಜಯಚಂದ್ರ : ಅಷ್ಟು ಹೇಳಿ ಸಾರ್ ನೀವು.

ಶ್ರೀ ಆರ್. ರೋಷನ್ ಬೇಗ್ : Wordings change ಮಾಡಿ.

ಅಧ್ಯಕ್ಷರು : Wordings change ಮಾಡಿದರೆ, that will give a different meaning.

ಶ್ರೀ ಜಗದೀಶ್ ಶೆಟ್ಟರ್ : ಆ ವ್ಯಾಪ್ತಿಗೆ ಸಂಬಂಧಪಟ್ಟಿದೆ.

ಶ್ರೀ ಸಿದ್ದರಾಮಯ್ಯ : SEZ ವ್ಯಾಪ್ತಿಯಲ್ಲಿ developers ಅಥವಾ co-developers ಯಾರೇ ಆಗಲಿ, . . .

ಶ್ರೀ ಟಿ.ಬಿ.ಜಯಚಂದ್ರ : ಇದರಲ್ಲಿ ಏನಾದರೂ ಹೆಚ್ಚು ಕಡಿಮೆ ಆದರೆ ನೀವೇ ಜವಾಬ್ದಾರರಾಗುತ್ತೀರಿ.

ಅಧ್ಯಕ್ಷರು : ಸರಿ.

ಶ್ರೀ ಆರ್.ರೋಷನ್ ಬೇಗ್ : ಸಾರ್, Developer ಎಂದು ಏಕೆ ಹಾಕುತ್ತೀರಿ? Developer, co-Developers ಎನ್ನುವುದು ಬೇಡ.

ಅಧ್ಯಕ್ಷರು : ಅಲ್ಲ, ಪಾಲಿಸಿಯಲ್ಲಿ it has been brought.

ಶ್ರೀ ಆರ್. ರೋಷನ್ ಬೇಗ್ : ಇದು real estate ದಂದೆ.

ಶ್ರೀ ಜಗದೀಶ್ ಶೆಟ್ಟರ್ : PPP ನಡೆದಿದೆ.

ಶ್ರೀ ಜಿ. ಕರುಣಾಕರ ರೆಡ್ಡಿ : ಕೈಗಾರಿಕೆ ಮಾಡುವವರಿಗೆ ಕೊಡುತ್ತಾರೆ.

ಶ್ರೀ ಸಿದ್ದರಾಮಯ್ಯ : SEZ ವ್ಯಾಪ್ತಿಯಲ್ಲಿ entrepreneur ಎಂದು ಹಾಕಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : No Developer, developer ಎಂದರೆ ಅದು real estate ಆಗುತ್ತದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನೀವು SEZ ಗೆ ಮಾತ್ರ ಕೊಡುತ್ತಿದ್ದೀರಿ. SEZ ಒಳಗೆ ಬರುವ Entrepreneur ಎಂದು ಹಾಕಿ.

ಡಾ: ಹೆಚ್.ಸಿ.ಮಹಾದೇವಪ್ಪ : ನಮ್ಮದು apprehension ಏನಿದೆ ಅಂದರೆ, developer, co-developers ಅಂದರೆ anybody can purchase land and he can start.

ಶ್ರೀ ಸಿದ್ದರಾಮಯ್ಯ : Entrepreneur ಎಂದು ಹಾಕಿ.

ಶ್ರೀ ಜಗದೀಶ್ ಶೆಟ್ಟರ್ : Entrepreneur ಅವರೇ developer.

ಶ್ರೀ ಸಿದ್ದರಾಮಯ್ಯ : ಮಾನ್ಯ ಜಗದೀಶ್ ಶೆಟ್ಟರೆ, ನೀವೂ ಲಾಯರ್. Developer ಅಂದರೆ ಯಾರು? Please define who is a developer?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸಿದ್ದರಾಮಯ್ಯನವರೆ, entrepreneur ಅಂದರೆ, ಆತನೇ ನಡೆಸುವಂತಹದ್ದು. He has to start industry. He has to construct. ಅವರನ್ನು entrepreneur ಎಂದು ಹೇಳುತ್ತಾರೆ. Developer ಅಂದರೆ develop ಮಾಡಬೇಕೆಂದು ಏನೂ ಇಲ್ಲ.

ಶ್ರೀ ಸಿದ್ದರಾಮಯ್ಯ : What is the difference between Enterpreneur and Developer?

ಶ್ರೀ ಜಗದೀಶ್ ಶೆಟ್ಟರ್ : ಅಲ್ಲ, ಅದು ಬೇರೆ.

ಶ್ರೀ ಜಿ. ಕರುಣಾಕರ ರೆಡ್ಡಿ : Real estate ಎನ್ನುವವರು ಬೇರೆ ಸಾರ್. ಅವರು Plant ಹಾಕಿ, . . . ಇದಕ್ಕೂ ಅದಕ್ಕೂ ಏನೂ ಸಂಬಂಧವಿಲ್ಲ.

SRI Siddaramaiah : ಅದು ಬೇರೆಯೇ? There is a difference according to you. I want to know.

(ಗೊಂದಲ)

SRI. SIDDARAMAIAH : Please define who is an Entrepreneur, who is a Developer, Who is a co-developer in the SEZ.

ಶ್ರೀ ಜಗದೀಶ್ ಶೆಟ್ಟರ್ : ನಮ್ಮ ರಾಜ್ಯದ ವಿಶೇಷ ಆರ್ಥಿಕ ವಲಯಗಳು, ನಿಮಗೂ ಒಂದು ಕಾಪಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ಸದ್ಯಕ್ಕೆ ನಮ್ಮ ರಾಜ್ಯದ ಪಾಲಿಸಿಯಲ್ಲಿ clear ಆಗಿ ಹೇಳಿದ್ದೇವೆ. ಏನೆಂದರೆ, ಅಭಿವೃದ್ಧಿದಾರ ಎಂದರೆ, Developer.

ಶ್ರೀ ಸಿದ್ದರಾಮಯ್ಯ : ಅದು ನನಗೆ ಅರ್ಥವಾಯಿತು. ಆದರೆ, what is the definition for Entrepreneur according to new policy. ನಿಮ್ಮ ಪಾಲಿಸಿ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : ನಮ್ಮ ಪಾಲಿಸಿಯಲ್ಲಿಯೇ ಇದೆ.

ಶ್ರೀ ಸಿದ್ದರಾಮಯ್ಯ : ಪಾಲಿಸಿ ಎಂದರೆ, ನಿಮ್ಮ ಪಾಲಿಸಿಯಲ್ಲಿ ಏನು ಬೇಕಾದರೂ ಹೇಳಿಕೊಳ್ಳಬಹುದೇ?

ಶ್ರೀ ಜಗದೀಶ್ ಶೆಟ್ಟರ್ : ನಮ್ಮ ಪಾಲಿಸಿಯಲ್ಲಿಯೇ specific ಆಗಿ mention ಮಾಡಿದ್ದೇವೆ.

ಶ್ರೀ ಸಿದ್ದರಾಮಯ್ಯ : No, no ಅದಕ್ಕೆ definition ಹೇಳಿ ಸ್ವಾಮಿ. ನಾವು ಕಾನೂನು ಮಾಡುತ್ತಿದ್ದೇವೆ. ಆದ್ದರಿಂದ ಕಾನೂನಿನಲ್ಲಿ it should be specific. There cannot be any ambiguity.

ಶ್ರೀ ಜಗದೀಶ್ ಶೆಟ್ಟರ್ : ಅಭಿವೃದ್ಧಿ ಮಾಡತಕ್ಕಂಥದ್ದು, ಈ SEZ ನ್ನು develop ಮಾಡುವಂಥದ್ದು, ಅಭಿವೃದ್ಧಿ ಮಾಡುವುದು ಅದೇ.

ಶ್ರೀ ಸಿದ್ದರಾಮಯ್ಯ : ಮಾನ್ಯ ಜಗದೀಶ್ ಶೆಟ್ಟರೆ, ambiguity ಇದೆ. I want to know.

ಶ್ರೀ ಜಗದೀಶ್ ಶೆಟ್ಟರ್ : ಇದರಲ್ಲಿ ಯಾವುದೇ ambiguity ಇಲ್ಲ.

SRI SIDDARAMAIAH : I want t know from the Chair atleast.

ಅಧ್ಯಕ್ಷರು : ಅದನ್ನೇ ನಾನೇ ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ : ತಾವೂ ಲಾಯರ್ ನೀವೇ ಹೇಳಿ. What is the difference between Entrepreneur and Developer?

ಅಧ್ಯಕ್ಷರು : ನನ್ನನ್ನೇನು ಕೇಳುತ್ತೀರಿ, ತಾವೂ ಲಾಯರ್, ಮಾನ್ಯ ಜಯಚಂದ್ರ ಅವರೂ ಲಾಯರ್, ಸುಮ್ಮನೆ ಇದರ ಬಗ್ಗೆ ಹೆಚ್ಚು ಮಾತನಾಡುವುದು ಬೇಡ.

Sri Siddaramaiah : I want to know who is a developer? Who is an entrepreneur? What is the difference between developer and entrepreneur?

Mr. SPEAKER : Developer is one who develops in the particular area.

ಶ್ರೀ ಸಿದ್ದರಾಮಯ್ಯ : ಹಾಗಾದರೆ, Real estate ಮಾಡುವ developer ಗೆ ಏನೆಂದು ಕರೆಯಬೇಕು?

ಅಧ್ಯಕ್ಷರು : Real Estate Developer, that gives a different meaning. ತಮಗೆ ಗೊತ್ತಿದೆ.

ಶ್ರೀ ಸಿದ್ದರಾಮಯ್ಯ : ಅಲ್ಲ, ನಾವು definition ತಿಳಿದುಕೊಳ್ಳಬೇಕು. ನಾಳೆ ತೊಂದರೆ ಹೆಚ್ಚಾಗುವ ಸಾಧ್ಯತೆಗಳು ಇರುತ್ತವೆ. The Developers will take shelter under this provision. Developer includes real estate agent.

ಅಧ್ಯಕ್ಷರು : Developer ಅಂದರೆ ಅಭಿವೃದ್ಧಿ ಮಾಡುವವರು ಎಂದು ಅರ್ಥ.

(ಗೊಂದಲ)

ಅಧ್ಯಕ್ಷರು : ಪಾಲಿಸಿ ಬಗ್ಗೆ ನಾನು ಮಾತನಾಡುವುದಿಲ್ಲ. ಪಾಲಿಸಿಗೆ ಸರಿಯಾಗಿ ಕಾಯ್ದೆಯನ್ನು ಮಾಡಿದ್ದಾರೆ. Developer ಅಂದರೆ ಅಭಿವೃದ್ಧಿ ಮಾಡುವವರು. Real estate ನವರು ಬೇರೆ ಬರುತ್ತಾರೆ.

Sri Siddaramaiah : We are not opposing the Bill itself. I don't say it is unconstitutional. I want to know, 3-4 ಪದಗಳನ್ನು ಹೇಳಿದ್ದೀರಿ. ಅಭಿವೃದ್ಧಿದಾರ, ಸಹ–ಅಭಿವೃದ್ಧಿದಾರ, ಮಾಲೀಕ, Entrepreneur, ಎಂಬುದಕ್ಕೆ ಅರ್ಥಗಳೇನು ಎನ್ನುವುದನ್ನು ಹೇಳಿ.

SRI JAGADISH SHETTAR : Special Economic Zone Act, 2005 ಅದರಲ್ಲಿ Developer means a person who or a State Government which has been granted by the Central Government's leter of approval under sub section 10 of the section 3 and includes an authority and a co-developer. SEZ ಒಳಗೆ developer definition ಇದೆ. ಇದು Central Government Act. ಅದರಲ್ಲಿಯೂ ಇದೆ. ಈ Developer ಆ purview ಒಳಗೆ ಬರುತ್ತದೆ. Real Estate ದು ತಾವೇನು ಅರ್ಥ ಮಾಡಿಕೊಂಡಿದ್ದೀರಿ, ಅದು ಬರುವುದಿಲ್ಲ. Definition clear ಆಗಿದೆ.

ಅಧ್ಯಕ್ಷರು : ಆ Developer ಎನ್ನುವ ಪದವನ್ನು ತೆಗೆದುಬಿಟ್ಟರೆ, ಆ ಪಾಲಿಸಿಗೂ ಇದಕ್ಕೂ ಏನೂ ಸಂಬಂಧವಿಲ್ಲದಂತಾಗುತ್ತದೆ.

ಶ್ರೀ ಸಿದ್ದರಾಮಯ್ಯ : Entrepreneur ಎಂದರೆ ಯಾರೂ ಬರುವುದಿಲ್ಲ.

ಅಧ್ಯಕ್ಷರು : Act ನಲ್ಲಿರುವುದು ಬಿಟ್ಟು ಹೇಗೆ ಮಾಡುವುದಕ್ಕಾಗುತ್ತದೆ? ಅಲ್ಲಿ Entrepreneur ಎನ್ನುವುದು ಇಲ್ಲ.

ಶ್ರೀ ಸಿದ್ದರಾಮಯ್ಯ : SEZ ನಲ್ಲಿ ಅದನ್ನು ಮಾಡುವುದಕ್ಕೆ ಬರುವುದಿಲ್ಲವೇ?

ಅಧ್ಯಕ್ಷರು : ಮಾನ್ಯ ಸಿದ್ದರಾಮಯ್ಯನವರೆ, ಆ Act ನಲ್ಲಿ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ : ತಾವು ಇದನ್ನು ನೋಡಿ. ಅವರೇ definition ಹೇಳಿದ್ದಾರೆ.

ಅಧ್ಯಕ್ಷರು : Definition is very clear. The amendment must be in accordance with the Act.

ಶ್ರೀ ಜಗದೀಶ್ ಶೆಟ್ಟರ್ : Developer ಅಂದರೆ, ಅವರು developer ಎಂದು ಹೇಳುತ್ತಲೇ ಇರಲಿಲ್ಲ, ಹಾಗಾಗಿ entrepreneur ಎಂದು definition ಕೊಡುತ್ತಿದ್ದರು. Developer ಎಂದು ಏಕೆ ಹಾಕುತ್ತಿದ್ದರು?

ಅಧ್ಯಕ್ಷರು : ಅದನ್ನು ಕೊಟ್ಟಿದ್ದರೆ no Problem at all.

ಶ್ರೀ ಟಿ.ಬಿ.ಜಯಚಂದ್ರ : Misinterpret ಆಗುತ್ತದೆ. Special Economic Zone ಮಾಡುವಂಥ ಸಂದರ್ಭದಲ್ಲಿ ಅವರು 50 ಎಕರೆ ಅಥವಾ 100 ಎಕರೆ ಜಮೀನನ್ನು ಕೊಂಡುಕೊಳ್ಳಬೇಕು. ಇಲ್ಲಿ ಏತಕ್ಕೆ ಅವಕಾಶವಾಗುತ್ತದೆ ಎಂದರೆ, ಯಾರೋ ರೈತನ ಹತ್ತಿರ ಒಬ್ಬರು agreement ಮಾಡಿಕೊಂಡಿರುತ್ತಾರೆ. Agreement ಮಾಡಿಕೊಂಡು Special Economic Zone ಅನ್ನು Government of India ದಿಂದ sanction ಮಾಡಿಸಿಕೊಳ್ಳುತ್ತಾರೆ. ಆ land transfer ಆಗುವುದಕ್ಕೆ you are giving an opportunity for him for a reduced stamp duty. Once it becomes the property of the Special Economic Zone, further allottees ಇರುತ್ತಾರಲ್ಲಾ, ಅವರಿಗೆ exemption ಕೊಡಿ. Economic Zone ಒಳಗೆ ಬರುವುದಕ್ಕೆ ಮುಂಚೆಯೇ ನೀವು ಏಕೆ Exempion ಕೊಡುವುದಕ್ಕೆ ಹೋಗುತ್ತೀರಿ?

ಶ್ರೀ ಜಗದೀಶ್ ಶೆಟ್ಟರ್ : 'ಹಣಕಾಸು ಸಂಸ್ಥೆ ಇವುಗಳಿಂದ ಅಥವಾ ಇವುಗಳ ನಡುವೆ ಯಾವುದೇ ಲಿಖಿತದ ಮೇಲೆ ಸಂದಾಯವಾಗತಕ್ಕ ಸ್ಟಾಂಪು ಶುಲ್ಕವನ್ನು ಅಧಿಸೂಚನೆ ಮೂಲಕ ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಕಡಿಮೆಗೊಳಿಸಬಹುದು ಅಥವಾ ಮಾಫಿ ಮಾಡಬಹುದು'.

ಅಧ್ಯಕ್ಷರು : Act ನಲ್ಲಿ Developer ಎಂದರೆ meaning ಅನ್ನೂ ಕೊಟ್ಟಿದ್ದಾರೆ. ಅದನ್ನು ಬಿಟ್ಟುಬಿಡಿ. There is an Act by Central Government.

ಶ್ರೀ ಟಿ.ಬಿ.ಜಯಚಂದ್ರ : SEZ between Developer, Co-developer and a land owner. . . would be available for one transaction only. Economic Zone ನಲ್ಲಿ ಮಾಡುವವನಿಗೆ ಲಾಭ ಆಗುತ್ತದೆ. Industry ಮಾಡುವವನಿಗೆ ಲಾಭ ಆಗುವುದಿಲ್ಲ.

ಅಧ್ಯಕ್ಷರು : In accordance with the Act amendment ತರುವುದಕ್ಕೆ ನೀವು oppose ಮಾಡಿದರೆ ಹೇಗೆ? ಇಲ್ಲ ಈ act ನಲ್ಲಿ ಸರಿಯಿದೆ.

ಶ್ರೀ ಟಿ.ಬಿ. ಜಯಚಂದ್ರ : ನೀವು ಬಹಳ ಅನ್ಯಾಯ ಮಾಡುತ್ತೀರಿ ಸಾರ್.

ಅಧ್ಯಕ್ಷರು : No, ಇಲ್ಲಿ ಅನ್ಯಾಯದ ಪ್ರಶ್ನೆ ಬರುವುದಿಲ್ಲ. ಈಗ speaker ನಾನೇ ಹೇಳುತ್ತಿರುವುದು. ಅಲ್ಲಿ Act ನಲ್ಲಿ ಏನಿದೆ, Developer means..

ಶ್ರೀ ಟಿ.ಬಿ.ಜಯಚಂದ್ರ : ನೀವು land owner ಗೆ ಸಹಾಯ ಮಾಡುತ್ತಿರುವುದು ಬಿಟ್ಟರೆ..

ಅಧ್ಯಕ್ಷರು : ಅಲ್ಲಿ Land owner ಶಬ್ದವೇ ಇಲ್ಲ. In that Act who is developer or who is co-developer, that is clearly explained. But still you are arguing different matter. clear ಆಗಿದೆ.

(6-50 PM)

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2010ರ ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಅಧ್ಯಕ್ಷರು : ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1, ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ. ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವ ಅಂಗೀಕಾರ

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, 2010ರ ಕರ್ನಾಟಕ ಸ್ಟಾಂಪ್ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸ ಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2010ರ ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು : ಈಗ 2009ರ ಕರ್ನಾಟಕ ಸಂಸ್ಕೃತ–ವೇದ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚನೆಗೆ ಮಾನ್ಯ ಉನ್ನತ ಶಿಕ್ಷಣ ಸಚಿವರು ಮಂಡಿಸುವುದು.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನಾವು ಬೆಳಿಗ್ಗೆಯಿಂದ ಕುಳಿತಿದ್ದೇವೆ. ನಿಮಗೆ ನಮ್ಮ ಮೇಲೆ ಸ್ವಲ್ಪವೂ ಕರುಣೆ ಇಲ್ಲವೇ? ನೀವೂ ಸಹ ಕುಳಿತಿದ್ದೀರಿ. ನಿಮ್ಮ ಬಗ್ಗೆಯೂ ನಮಗೆ ಬಹಳ ಗೌರವವಿದೆ. ನೀವು ಒಬ್ಬರೇ ಬೆಳಿಗ್ಗೆಯಿಂದಲೂ ಕುಳಿತುಕೊಳ್ಳುತ್ತೀರಿ. ನಿಮಗೂ ಬಹಳ ಕಷ್ಟವಿದೆ. ಈಗ ಸದನದಲ್ಲಿ ಎಲ್ಲಾ ಶಾಸಕರಿದ್ದಾರೆ. ಈಗ ಪ್ರಶ್ನೋತ್ತರ ಕಲಾಪವನ್ನು ಕೈಗೆತ್ತಿಕೊಳ್ಳಿ.

ಶ್ರೀ ಅರವಿಂದ ಲಿಂಬಾವಳಿ : ಇದು ಸಣ್ಣ ವಿಧೇಯಕವಾಗಿದೆ.